ವಾರಪತ್ರಿಕೆ.
[illegible]

ಸ. ದಾ. ಪುರದಲ್ಲಿ

[illegible] ಮೇಲೆ [illegible] ಹಲ್ಲೆಗೆ ಯತ್ನ :

[illegible]ಬೂರಿನ ಡಾ|| ನಾಗರಾಜ್ ಬಂಧನ - ಬಿಡುಗಡೆ

[illegible]

[illegible] ಹೋಗಿದ್ದಾಗಿ [illegible] ಯತ್ನಿಸಿದರು. [illegible]

ಯಿತು. [illegible]

ಅನಂತರ [illegible]

ಉತ್ತಮೇಶ್ವರ ಆಸ್ಪತ್ರೆ ಬಾಗಿಲು ತೆರೆದೀತೆ ?

ಉತ್ತಮೇಶ್ವರ: [illegible] ವರ್ಷಗಳ [illegible] ನಂತರ ಈ [illegible] ಒಂದು ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಯಿತು. [illegible] ರೊಳಗೆ ಸಾರ್ವಜನಿಕ ವಂತಿಗೆಯಾದ [illegible] ಸಾವಿರ ರೂ. ವಂತಿಗೆ ಕಟ್ಟಿದ್ದರೆ ಮಂಜೂರಾತಿ ದೊರಕುವುದಾಗಿ ತಿಳಿಸಲಾಗಿತ್ತು. ಇಷ್ಟು [illegible] ಹೇಗೋ ಹೊಂದಿಸಿ [illegible] ಕಟ್ಟಲಾಯಿತು.

[illegible]

ಯನು ಆಸ್ಪತ್ರೆಗೆ [illegible] ಒದಗಿಸಿದ್ದಾರೆ.

ಇಷ್ಟಾದರೂ— (ಆನೇ ಪುಟಕ್ಕೆ)

ಕೊರ್ಡಹಳ್ಳಿಯಲ್ಲಿ ಸ. [illegible]ರಂದು ನಡೆದ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ [illegible]ಗಳ ಮಹಿಳೆಯರು ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಂಡರು.

ಕುಟುಂಬ ಯೋಜನೆ : [illegible]

ತಾಲ್ಲೂಕಿನ ಹೆಮ್ಮೆಯ ಸಾ[illegible]

ಕೊಪ್ಪ: ಇಲ್ಲಿನ ತಾ|| [illegible] ಮಂಡಳಿಯು ಕುಟುಂಬ ಕಲ್ಯಾಣ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆಗೇ ಪ್ರಥಮ ಸ್ಥಾನ ಪಡೆದಿದೆ.

ಈ ಪ್ರಯುಕ್ತ [illegible],೦೦೦ ರೂ.ಗಳ ವಿಶೇಷ ಬಹುಮಾನವನ್ನು ಸ.[illegible] ರಂದು [illegible] ನಡೆದ ಸಮಾರಂಭದಲ್ಲಿ [illegible]

[illegible] ಜಿಲ್ಲಾ [illegible] ನವರಿಂದ ಸ್ವೀಕರಿಸಿದರು.

ಮುಂದೆಯೂ ಈ ಸಾಧನೆ[illegible] [illegible]

ಹೆಸರಿಗೊಬ್ಬ, ಹೆಬ್ಬೆಟ್ಟಿಗೊಬ್ಬ ;

ಹಾರೆ, ಪಿಕಾಸಿ ಪಡೆದವ ಮತ್ತೊಬ್ಬ !

ಅತ್ತಿಗದ್ದೆ: ಬಡವರನ್ನು ಮೇಲಕ್ಕೆತ್ತುವ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಯಾವ ರೀತಿ ಅನುಷ್ಠಾನಕ್ಕೆ ಬಂದಿದೆ ಎಂಬುದಕ್ಕೆ [illegible] ಉದಾಹರಣೆಗಳಿವೆ.

[illegible] ಹಾರೆ, ಪಿಕಾಸಿ [illegible]

[illegible] ಘಟನೆ [illegible] ಮಾತಾಗಿದೆ.

"ಸಾಕಲಿಕ್ಕಾ[illegible]ನಿಗೆ ಯಾತಕ್ಕೋ [illegible]"

[illegible]

ಕೊಪ್ಪದಲ್ಲಿ [illegible]

ಫೋಟೋಸ್ಟಾ[illegible]

ಕಾಪಿ ಸೆಂಟ[illegible]

[illegible] ಟೆಕ್ಸ್‌ಟೈಲ್ಸ್ [illegible] ಕೊಪ್ಪ [illegible] ಪ್ರಾರಂಭವಾಗಿದೆ[illegible]

ಶರಾಬು ಮಾರಾಟ: ಸರ್ಕಾರಕ್ಕೊಂದು ಸಲಹೆ

ಕರ್ನಾಟಕ ರಾಜ್ಯದ ಹಣಕಾಸು ಮಂತ್ರಿಗಳಾದ ಶ್ರೀ ವೀರಪ್ಪಮೊಯಿಲಿ ಇವರ ಸಮಕ್ಷಮಕ್ಕೆ,

ಸ್ವಾಮಿ,

ರಾಜ್ಯದಲ್ಲಿ ತಮ್ಮ ಸರ್ಕಾರ ಬಡ ಜನತೆಯ ಕಲ್ಯಾಣಕ್ಕೋಸ್ಕರ ಅನೇಕ ವಿಧವಾದ ಯೋಜನೆಗಳನ್ನು ಜಾರಿಗೆ ತರುತ್ತಿರುವುದು ಶ್ಲಾಘನೀಯ. ಅಂತೆಯೇ ನಾನು ಸೂಚಿಸುವ ಈ ಒಂದು ಸಣ್ಣ ಯೋಜನೆಯನ್ನು ಸರ್ಕಾರ ಜಾರಿಗೆ ತರಬೇಕೆಂದು ಬಯಸುತ್ತೇನೆ.

ಅದೇನೆಂದರೆ, ಸರ್ಕಾರವು ಅಬ್ಕಾರಿ ಹರಾಜು ಮೂಲಕ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಹಣವನ್ನು ತುಂಬಿಸಿಕೊಳ್ಳುತ್ತಿದೆ. ಈ ಹಣವನ್ನು ಗುತ್ತಿಗೆದಾರರು ಸರ್ಕಾರಕ್ಕೆ ಪಾವತಿ ಮಾಡಿದರೂ ಇದು ಬಡವರ ಬೆವರಿನ ಹಣವೆಂಬುದನ್ನು ಸರ್ಕಾರ ಮರೆಯಬಾರದು. ಈ ಬಡವರ ಬೆವರಿನ ಹಣವು ಶ್ರೀಮಂತ ಗುತ್ತಿಗೆದಾರರ ಪಾಲಾಗುವ ಬದಲು ಬಡವರ ಆಪತ್ತಿಗೆ ಒದಗಿ ಬರಬೇಕು. ಅದಕ್ಕಾಗಿ ಸರ್ಕಾರ ಈಗ ತಾನು ಅನುಸರಿಸುತ್ತಿರುವ ಹರಾಜು ಪದ್ಧತಿಯನ್ನು ರದ್ದುಮಾಡಿ ಸರ್ಕಾರವೇ ಇದನ್ನು ನಡೆಸಬೇಕು. ಈಗ ಸರ್ಕಾರವು ಗುತ್ತಿಗೆದಾರನಿಗೆ ಶರಾಬನ್ನು ಎಲ್ಲಾ ಸೆಸ್ ಸೇರಿಸಿ ಲೀಟರ್ ಒಂದಕ್ಕೆ ೬.೦೦ ರೂಪಾಯಿಗೆ ಒದಗಿಸುತ್ತಿದೆ. ಅದನ್ನು ಗುತ್ತಿಗೆದಾರರು ೩೦/-ರಿಂದ ೩೫/-ರೂ.ವರೆಗೂ ಮಾರಾಟ ಮಾಡಿ ಬಡವರನ್ನು ಸುಲಿದು ತಮ್ಮ ಜೇಬು ಭರ್ತಿಮಾಡಿಕೊಳ್ಳುವುದಲ್ಲದೆ ಸರ್ಕಾರಕ್ಕೂ ಸಾಕಷ್ಟು ಆದಾಯ ಸಲ್ಲಿಸುತ್ತಿದ್ದಾರೆ.

ಸರ್ಕಾರದ ಉದ್ದೇಶ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದೇ ನಿಜವಾದರೆ ಈ ಹರಾಜು ಪದ್ಧತಿ ನಿಲ್ಲಬೇಕು. ಸರ್ಕಾರವು ಕಂಟ್ರಾಕ್ಟರಿಗೆ ಲೀಟರಿಗೆ ೬.೦೦ ರೂನಂತೆ ಶರಾಬು ಮಾರುವುದನ್ನು ನಿಲ್ಲಿಸಿ ತಾನೇ ನೇರವಾಗಿ ಗ್ರಾಹಕನಿಗೆ ೩೦/-ರೂನಂತೆ ಮಾರಾಟ ಮಾಡಬೇಕು. ಈ ೩೦/-ರೂನಲ್ಲಿ ಬಡ ಗ್ರಾಹಕನ ಕಲ್ಯಾಣಕ್ಕಾಗಿ ಅವನು ಪ್ರತಿ ಬಾರಿಕೊಂಡ ಶರಾಬಿನ ಹಣದಲ್ಲಿ ಕನಿಷ್ಠ ಶೇ. ೪೦ ರಷ್ಟನ್ನು ಅವನ ಕಲ್ಯಾಣನಿಧಿಗಾಗಿ ತೆಗೆದಿಡಬೇಕು. ಈ

ವೇದಿಕೆ

ಮೊತ್ತವನ್ನು ಬ್ಯಾಂಕುಗಳು ಪಿಗ್ಮಿ ಯೋಜನೆಯಲ್ಲಿ ಶೇಖರಿಸುವ ಹಣದಂತೆ ಪ್ರತಿಯೊಬ್ಬ ಗ್ರಾಹಕನಿಗೂ ಒಂದು ಪಾಸ್ ಬುಕ್ ವ್ಯವಸ್ಥೆ ಮಾಡಿ ಅದರಲ್ಲಿ ಆ ಹಣ ನಮೂದಾಗಬೇಕು. ಹಾಗೂ ಈ ರೀತಿ ಜಮಾ ಆಗತಕ್ಕ ಹಣವನ್ನು ಹತ್ತು ವರ್ಷದ ಅವಧಿಯವರೆಗೆ ಮರುಪಾವತಿ ಮಾಡಬಾರದು. ಹತ್ತು ವರ್ಷದ ಅವಧಿಯ ಮೇಲೆ **ಬಡ್ಡಿ ರಹಿತವಾಗಿ** ಈ ಹಣವನ್ನು ಮರುಪಾವತಿ ಮಾಡಬೇಕು. ಒಂದು ವೇಳೆ ಕುಟುಂಬದ ಯಜಮಾನನು ಈ ಹತ್ತು ವರ್ಷದ ಅವಧಿಯೊಳಗೆ ಮೃತಪಟ್ಟರೆ ಈ ಹಣವನ್ನು ಅವನ ಸಂಸಾರಕ್ಕೆ ಪಾವತಿಸಬೇಕು.

ಶರಾಬನ್ನು ಯಾವುದೇ ಕಾರಣದಿಂದ ಅಳತೆ ಮಾಡಿ ಮಾರುವ ಏರ್ಪಾಡು ಇರಬಾರದು. ಸರ್ಕಾರವು ೧೮೦ ಮಿ ಲಿ. ೧೦೦ ಮಿ ಲಿ. ಮತ್ತು ೬೦ ಮಿ ಲಿ. ಮೊಹರು ಮಾಡಿದ ಬಾಟಲಿಗಳಲ್ಲಿ ಮಾರಾಟ ಮಾಡಬೇಕು. ಇದರಿಂದ ಸಾಕಷ್ಟು ಕಲಬೆರಕೆ, ವಿಷ ಮಿಶ್ರಣ ತಪ್ಪುವುದು ಹಾಗೂ ಗ್ರಾಹಕ ಅಳತೆಯವನ ಕೈ ಚಾಲೂಕಿನಿಂದ ಆಗುವ ನಷ್ಟದಿಂದ ದೂರವಾಗುತ್ತಾನೆ.

ಮಾರಾಟಮಾಡುವ ವೇಳೆಯನ್ನು ಸಂಜೆ ೫-೩೦ ರಿಂದ ೧೦ ಘಂಟೆಯವರೆಗೆ ಮಾತ್ರ ನಿಗದಿಗೊಳಿಸಬೇಕು. ಈ ಮಾರಾಟದ ವ್ಯವಸ್ಥೆಗೆ ಸಾಕಷ್ಟು ವಿದ್ಯಾವಂತ ನಿರುದ್ಯೋಗಿಗಳನ್ನು ಉಪಯೋಗಿಸಬೇಕು.

ಈ ವ್ಯವಸ್ಥೆಯನ್ನು ಇನ್ನೂ ಹೆಚ್ಚಿನ ಮಟ್ಟದ ಸುಧಾರಿತ ರೀತಿಯಲ್ಲಿ ಜಾರಿಗೆ ತಂದರೆ ಬಡಜನರ ಕಲ್ಯಾಣಕ್ಕೆ ಸರ್ಕಾರ ಇಟ್ಟ ಇನ್ನೊಂದು ಕ್ರಾಂತಿಕಾರಕ ಯೋಜನೆಯೆಂದು ನನ್ನ ಅನಿಸಿಕೆಗಳನ್ನು ತಮಗೆ ಮುಂದೆ ಇಟ್ಟಿರುತ್ತೇನೆ. ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಿರೆಂದು ಆಶಿಸಿದ್ದೇನೆ.

ಇಂತೀ ವಂದನೆಗಳೊಡನೆ,
-ಕೆ. ಗೋಪಾಲರಾವ್,
ಪಂಚಾಯ್ತಿ ಸದಸ್ಯರು,
ಭಕ್ತಂಪುರ, ಶೃಂಗೇರಿ.

ಕತ್ತೆ

ಬೈಗುಳಕೆ ಬಹುಮಂದಿ ಹೇಳುವರು–
'ಕತ್ತೆ!'
ಕತ್ತೆಯ ಪರಿಪೂರ್ಣತೆ ನಮಗಿಲ್ಲ,
ಗೊತ್ತೆ?
ಮೈಮುರಿದು ದುಡಿದುಡಿದು ಪಡೆವುದದು
ಮೇವು
ಕತ್ತೆಗಿಂತಲೂ ಕೀಳು, ನರರು ನಾವು!

ಶುಭಾಶಯ

ಪ್ರೇಮವೆಂಬ ಎಳೆಬಿಸಿಲಿರಲು,
ಪ್ರೀತಿಯೆಂಬ ಮಳೆಯದು ಸುರಿದು,
ಸರ್ವರ ಬಾಳಿನ ಬಾಂದಳದಲ್ಲಿ
ಮೂಡಲಿ ಸುಖದಾ ಮಳೆಬಿಲ್ಲು!
—ಲಲಿತಾತ್ಮಜ

ಅಡಿಕೆ ತೋಟಗಳಿಗೆ ತೊಂಡೆ ರೋಗ

ಕೊಪ್ಪ : ಕೊಪ್ಪ, ಶೃಂಗೇರಿ ಭಾಗಗಳಲ್ಲಿ ಅಲ್ಲಲ್ಲಿ ಅಡಿಕೆ ತೋಟಕ್ಕೆ ತೊಂಡೆ ರೋಗ ಈಗಾಗಲೇ ಸಾಕಷ್ಟು ಹಾನಿ ಮಾಡಿದ್ದು, ಈಗ ಇನ್ನಷ್ಟು ವ್ಯಾಪಕವಾಗಿ ಹರಡುತ್ತಿರುವ ವರದಿಗಳು ಬರುತ್ತಿವೆ.

ಜಯಪುರ ಹೋಬಳಿಯ ಅಗಳಗಂಡಿ, ಹೆಗ್ಗಾರುಕುಡಿಗೆ ಸುತ್ತಮುತ್ತ ಕೆಲವು ತೋಟಗಳು ಪೂರ್ತಿ ನಿರುಪಯುಕ್ತವಾಗಿವೆ ಎನ್ನಲಾಗಿದೆ. ಈಚೆಗೆ ಶೃಂಗೇರಿ ತಾ॥ ಮರ್ಕಲ ಗ್ರಾಮದ ಹೆಗ್ಗೂರು, ಮಾಲಸಂಪಿಗೆ ಮುಂತಾದ ಕಡೆಗಳಲ್ಲಿ ಹತ್ತಾರು ಎಕರೆ ತೋಟಗಳು ಈ ರೋಗಕ್ಕೆ ತುತ್ತಾಗಿವೆಯೆಂದು ತಿಳಿದುಬಂದಿದ್ದು, ಸೆ. ೨೭ ರಂದು ನಡೆದ ಮರ್ಕಲ್ ಗ್ರಾಮಪಂಚಾಯ್ತಿ ಸಭೆಯಲ್ಲಿ, ೧) ರೋಗಪೀಡಿತ ತೋಟದ ಮಾಲೀಕರಿಗೆ ಪರಿಹಾರ, ೨) ಭೂಕಂದಾಯದ ರಿಯಾಯ್ತಿ ಮತ್ತು ೩) ಬೇರೆ ಬೆಳೆಗೆ ಬದಲಿಸಲು ಅನುಮತಿ–ಇವನ್ನು ಮಂಜೂರು ಮಾಡಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡುವ ನಿರ್ಣಯ ಕೈಗೊಳ್ಳಲಾಗಿದೆ.

ಇದಲ್ಲದೆ ರೈತರು ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ: ೧) ತೋ

(೩ನೇ ಪುಟಕ್ಕೆ)

ಜಾಹೀರಾತಿಗೆ 'ಮುಂಜಾವು' ಅತ್ಯುತ್ತಮ ಮಾಧ್ಯಮ

ಮೋರಿಗಳ ನಿರ್ಮಾಣ ಮುಂದುವರಿಸುವ ಬಗ್ಗೆ

ಇಂಜಿನಿಯರ್ ಭರವಸೆ

ಕಿಗ್ಗ ಹೋಬಳಿಯ ಕೆಲ್ಲಾರು–ಚಟ್ನಮನೆ ನಡುವೆ ಸುಮಾರು ೬ ಕಿ. ಮೀ. ಗ್ರಾಮಾಂತರ ಕಚ್ಚಾ ರಸ್ತೆಯಲ್ಲಿ ೨೭ ಮೋರಿಗಳ ನಿರ್ಮಾಣಕ್ಕೆ ೨ ವರ್ಷದ ಹಿಂದೆ ಮಂಜೂರಾತಿ ಸಿಕ್ಕಿದ್ದು, ಐದಾರು ಮೋರಿಗಳ ನಿರ್ಮಾಣ ಆಗಿತ್ತು. ಉಳಿದ ಕೆಲವಕ್ಕೆ ಜಾಗ ಗುರುತು ಮಾಡಿದ್ದರು.

ಆದರೆ ಆ ಪ್ರದೇಶದ ಗ್ರಾಮಸ್ಥರು ಕೂಲಂಕಷವಾಗಿ ಚರ್ಚೆ ನಡೆಸಿ, ಕಳೆದ ವರ್ಷ ಇಲಾಖೆಗೆ ಒಂದು ಪತ್ರ ಬರೆದರು. (೧) ಅಷ್ಟೊಂದು ಮೋರಿಗಳು ಅನಗತ್ಯ. (೨) ಮೋರಿಗಳ ಸ್ಥಳ ಗುರ್ತುಮಾಡಿರುವುದು ಸಮರ್ಪಕವಾಗಿಲ್ಲ. ಗ್ರಾಮದ ಹಿರಿಯರ ಜೊತೆ ಸಮಾಲೋಚಿಸಿ, ರಸ್ತೆಯ ಮೇಲೆ ನೀರು ನುಗ್ಗುವ ಕಡೆ ಮೋರಿ ಬರುವಂತೆ ಪುನಃ ಜಾಗ ಗುರ್ತಿಸಬೇಕು. (೩) ಮೋರಿಗಳ ಎರಡೂ ದಿಕ್ಕಿಗೆ ರಸ್ತೆಯ ಎರಡೂ ಮಗ್ಗುಲಲ್ಲಿ ಕನಿಷ್ಠ ೨೦ ಅಡಿ ದೂರದವರೆಗೆ ಚರಂಡಿ ಬಿಡಿಸಬೇಕು. (೪) ಮೋರಿಗಳ ಮತ್ತು ಕಟ್ಟಣಗಳ ರಚನೆ ಸರಿಯಿಲ್ಲ. ಸಿಮೆಂಟ್ ಬಳಕೆ ಪ್ರಮಾಣ ಸರಿಯಾಗಿಲ್ಲ. ರಚನೆ ಸಮರ್ಪಕವಾಗಿರಬೇಕು-ಮುಂತಾದ ಪ್ರಮುಖ ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದರು. ಅವರ ಪ್ರತಿನಿಧಿಗಳು ಆಗಿನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಬಾಲಕೃಷ್ಣರನ್ನು ಭೇಟಿ ಮಾಡಿ ಚರ್ಚಿಸಿದ್ದರು.

ಬಾಲಕೃಷ್ಣ ಸ್ಥಳಕ್ಕೆ ಭೇಟಿ ನೀಡಿ, ಕೆಲವು ಮೋರಿಗಳ ರಚನೆ ಅಸಮರ್ಪಕವಾಗಿದ್ದುದನ್ನು ಗಮನಿಸಿ, ಒಂದು ಮೋರಿಯನ್ನು ಒಡೆಸಿಹಾಕಿ ಪುನಃ ನಿರ್ಮಿಸಲು ಆಜ್ಞೆ ಮಾಡಿದರು. ಅನಂತರ, ಕಾಮಗಾರಿಯ ಕಂಟ್ರಾಕ್ಟ್ ವಹಿಸಿದ್ದ ಕಾನೊಳ್ಳಿ ಕೃಷ್ಣಪ್ಪ ಅವರ ಕಂಟ್ರಾಕ್ಟ್ ರದ್ದಾಗಿ ಬೇರೆಯವರಿಗೆ ಕಂಟ್ರಾಕ್ಟ್ ವಹಿಸಲಾಯಿತೆಂದು ಹೇಳಲಾಗಿದೆ.

ಗ್ರಾಮಸ್ಥರೇನೋ ಈ ದೇಶದಲ್ಲಿ ಅತ್ಯಂತ ಎಚ್ಚೆತ್ತ, ಜವಾಬ್ದಾರಿಯ ಜನರು ಮಾಡಬಹುದಾದ್ದನ್ನೇ ಮಾಡಿದ್ದರು. ಇಲಾಖೆಗೆ ಸಂಪೂರ್ಣ ಸಹಕಾರ ಕೊಡುವ ಭರವಸೆಯನ್ನೂ ಕೊಟ್ಟಿದ್ದರು. ಆದರೇನು? ಅಕಸ್ಮಾತ್ ಚಾಲೂ ಆಗಿದ್ದ ಸರ್ಕಾರಿ ಯಂತ್ರ ಒಮ್ಮೆ ಬಂಚೂರು ನಿಂತಿತೆಂದರೆ ಮತ್ತೆ ಚಾಲೂ ಆಗುವುದಕ್ಕೆ ಭಗೀರಥ ಪ್ರಯತ್ನವೇ ಬೇಕಲ್ಲವೆ? ಹೀಗಾಗಿ ಕೆಲಸ ನಿಂತೇ ಹೋಗಿತ್ತು. ಈ ವಿಷಯ ತಾ॥ ರೈತ ಸಂಘದಲೂ ಚರ್ಚೆಯಾಗಿತ್ತು.

ಈಚೆಗೆ ಕೊಪ್ಪ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆ.ವಿ.ವೆಂಕಟಯ್ಯ ಹಾಗೂ ಶೃಂಗೇರಿಯ ಸ॥ ಇಂಜಿನಿಯರ್ ಸೋಮಶೇಖರ್ ಅವರುಗಳ ಜೊತೆ ಮರ್ಕಲ್ ಪಂಚಾಯ್ತಿ ಸದಸ್ಯ ಕಜ್ಜೋಡಿ ಶ್ರೀನಿವಾಸ್ ಈ ಬಗ್ಗೆ ಪ್ರಸ್ತಾಪಿಸಿದ್ದರಂತೆ. ಮೊನ್ನೆ ವೆಂಕಟಯ್ಯನವರಿಗೆ ಈ ವಿಷಯವನ್ನು 'ಮುಂಜಾವು' ಸಂಪಾದಕರು ಜ್ಞಾಪಿಸಿದಾಗ, ವಿಷಯವನ್ನು ಪರಿಶೀಲಿಸಿ ಕೆಲಸ ಪುನಃ ಆರಂಭಿಸುವ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ.

'ಹೊಸ ಅಲೆ' ಚಿತ್ರಗಳ ಬಗ್ಗೆ ವಿಜಯ್ ಗುಜ್ಜಾರ್:

"ನಿರ್ಮಾಪಕನ ಹಣವೂ ಹಿಂದೆ ಬರಬೇಕಲ್ಲ!"

"ಸುಮ್ನೆ 'ಹೊಸ ಅಲೆ' ಚಿತ್ರ ಅಂತ ಮಾಡಿದರಾಯಿತಾ? ಜನ ನೋಡಬೇಕಲ್ಲ. ನಿರ್ಮಾಪಕ ಹಾಕಿದ ಹಣ ಹುಟ್ಟಬೇಕಲ್ಲ."

—ಹೀಗೆನ್ನುವವರು ಕನ್ನಡ ಚಿತ್ರರಂಗದ ಹೊಸ ನಿರ್ದೇಶಕ ವಿಜಯ್ ಗುಜ್ಜಾರ್.

ಅವರು ಈಚೆಗೆ 'ಜಗ್ಗು' ಚಿತ್ರೀಕರಣಕ್ಕಾಗಿ ಕೊಪ್ಪದಲ್ಲಿ ತಂಗಿದ್ದಾಗ "ಮುಂಜಾವು" ಜೊತೆ ಲೋಕಾಭಿರಾಮವಾಗಿ ಮಾತಾಡುತ್ತಾ, 'ಹೊಸ ಅಲೆ ಚಿತ್ರಗಳ ಬಗ್ಗೆ ನಿಮಗೇನನಿಸುತ್ತದೆ?' ಎಂಬ ಪ್ರಶ್ನೆಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು.

"ಹೊಸ ಅಲೆ ಚಿತ್ರಗಳು ಅಂತ ಎಷ್ಟೋ ಪ್ರಶಸ್ತಿ ಕೊಡ್ತಾರಲ್ಲ. ಅಂಥ ಎಷ್ಟೋ ಚಿತ್ರಗಳನ್ನು ಪ್ರದರ್ಶನಕ್ಕೆ ಕೊಳ್ಳುವವರಿಲ್ಲ ಗೊತ್ತಾ? ದೊಡ್ಡದೊಡ್ಡ ನಿರ್ದೇಶಕರಿದ್ದಾರೆ. ಹೆಸರಾಂತ ಕಲಾವಿದರಿದ್ದಾರೆ. ಅದರೂ ಡಬ್ಬ ಹೊರಗೆ ಬರುವುದಿಲ್ಲ.

ಇವತ್ತಿನ ಕಾಲದಲ್ಲಿ ಜನಕ್ಕೆ ಏನುಬೇಕು ಅಂತ ತಿಳ್ಕೊಂಡು ಅದನ್ನೇ ಕಲಾತ್ಮಕವಾಗಿ ಮಾಡಬೇಕು ಅದು ವಾಸ್ತವಿಕ ಮಾರ್ಗ" ಎನ್ನುತ್ತಾರೆ ಗುಜ್ಜಾರ್.

'ಮುಂಜಾವು' ಕಿರು ಸಂದರ್ಶನ

ಸಿನಿಮಾ ಮಾಡಲು ಹಣ ಕಾಸಿನ ನೆರವಿನ ಬಗ್ಗೆ ವಿಚಾರಿಸಿದಾಗ ಅವರ ಉತ್ತರ– ಸಿನಿಮಾ ಮಾಡಲು ಯಾರೂ ಸಾಲ ಕೊ

(೩ನೇ ಪುಟಕ್ಕೆ)

ಓದುಗರ ಪತ್ರ

ನರಸಿಂಹರಾಜಪುರದಲ್ಲಿ 'ಖದೀಮಕಳ್ಳರು'ಬಿಡುಗಡೆ !

ಇಲ್ಲಿಯ ಉಪಬಂದೀಖಾನೆಯಿಂದ ತಪ್ಪಿಸಿಕೊಂಡು ಹೋದ ಕೈದಿಗಳಿಗೆ ಸಿನಿಮಾ ಸ್ಫೂರ್ತಿ ಇರಬೇಕೆಂದು ಕಾಣುತ್ತದೆ. ಎದುರುಗಡೆಯೇ ಸ್ಟೇಟ್ ಬ್ಯಾಂಕ್ ಕಛೇರಿ ಇದ್ದು, ಅದರ ಕಾವಲುಗಾರ ಎಚ್ಚೆತ್ತಿದ್ದರೆ ಈ ಒಂದು ಅನಾಹುತವನ್ನು ತಪ್ಪಿಸ ಬಹುದಿತ್ತೇನೋ. 'ಖದೀಮಕಳ್ಳರು' (ಇನ್ನೂ ಬಿಡುಗಡೆಯಾಗಿಲ್ಲ) ಹಿಡಿಯಲು ಇಲ್ಲಿಯ ಪೋಲೀಸರು ಪಣತೊಟ್ಟಿದ್ದಾರೆ. ಅವರ ಕಾರ್ಯ ಯಶಸ್ವಿಯಾಗಲಿ.

—ಮಹಾಬಲ, ನ.ರಾ.ಪುರ

'ಹೊಸ ಅಲೆ'ಯ ಚಿತ್ರಗಳು

(೨ನೇ ಪುಟದಿಂದ)

ಡೊಲ್ಲ. ಬಡ್ಡಿ ವ್ಯವಹಾರ ಮಾಡ್ತೀರಾದರೆ ಬೇಕಾದಷ್ಟು ಸಾಲ ಕೊಡುವವರಿದ್ದಾರೆ. ಇಲ್ಲ, ರಿಸ್ಕ್ ಇಲ್ಲದೆ ಚಕ್ಕನೆ ಹತ್ತು ಪಟ್ಟು ಲಾಭಬರುವಂಥ ವ್ಯವಹಾರಕ್ಕೆ ದುಡ್ಡು ಹುಟ್ಟುತ್ತೆ.

"ಹಾಗಲ್ಲ, ಸರ್ಕಾರದಿಂದ ರಚಿತವಾದ ಚಲನ ಚಿತ್ರ ಅಭಿವೃದ್ಧಿ ಕಾರ್ಪೊರೇಶನ್ ನಂಥ ಸಂಸ್ಥೆಗಳು ಹಣಕಾಸಿನ ನೆರವು ಕೊಡುವುದಿಲ್ಲವೆ?"–'ಮುಂಜಾವು' ಪ್ರಶ್ನೆ.

"ಎಲ್ಲಿ ಸ್ವಾಮಿ, ಅಲ್ಲಿರುವ ದುಡ್ಡು ಅಲ್ಲಿನವರ ಸಂಬಳ–ಸಾರಿಗೆ ಖರ್ಚುಗಳಿಗೇ ಸಾಕಾಗುವುದಿಲ್ಲ. ಎಲ್ಲಾ ಪ್ರಚಾರ ಅಷ್ಟೆ. ಯಾವನೂ ಕೊಡೋನಿಲ್ಲ. ಸ್ವಂತ ಬಂಡವಾಳ ಇದ್ದರೆ ಸಿನಿಮಾ ಮಾಡಬೇಕು".— ಸ್ವಲ್ಪ ಕಹಿಯಾಗಿಯೇ ಹೇಳುತ್ತಾರೆ ಗುಜ್ಜಾರ್.

ಅವರ ದೃಷ್ಟಿಯಲ್ಲಿ ಕೊಪ್ಪ, ತೀರ್ಥಹಳ್ಳಿ ಸುತ್ತ ಮುತ್ತಲ ಹೊರಾಂಗಣ ಪರಿಸರ ಸಾಧಾರಣ. ಅಂಥ ಮಹಾ ಎನ್ನುವಂತೇನಿಲ್ಲ.

'ಜಗ್ಗು' ಇವರ ಮೊದಲ ಚಿತ್ರ. ಅದು ಇನ್ನೇನು ಮುಗಿದಂತೆ. ಅಂಬರೀಶ್ ಪ್ರಧಾನ ಪಾತ್ರದ ಈ ಚಿತ್ರದ ಕತೆ ಆರ್.ಎನ್ ಜಯಗೋಪಾಲ್‌ರದು.

ಅಡಿಕೆಗೆ ತೊಂಡೆರೋಗ

(೨ನೇ ಪುಟದಿಂದ)

ಟದ ಮಾಲೀಕರಿಗೆ ಎಕ್ರೆಗೆ ೭ ಸಾವಿರ ರೂ.ಗಳ ಬಡ್ಡಿ ರಹಿತ ಸಾಲ ಒದಗಿಸುವುದು; ೨) ಕಾಫಿ ಬೆಳೆಯಲು ದರ್ಖಾಸ್ತು ಕೊಡಿಸುವುದು; ೩) ಶ್ರೀಮಂತ ರೈತರಿಗೂ ಕೃಷಿ ಆದಾಯ ತೆರಿಗೆಯಲ್ಲಿ ರಿಯಾಯ್ತಿ ಮತ್ತು ೪) ಸಹಕಾರಿ ಸಾಲ ಪಡೆದ ರೈತರಿಗೆ ದೀರ್ಘಾವಧಿ ಮರುಪಾವ್ತಿ ಅವಕಾಶ ಒದಗಿಸುವುದು.

ಈ ತೊಂಡೆರೋಗದ ಬಗ್ಗೆ ೧೯೬೫ರಿಂದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಹಾಗೂ ವಿಟ್ಲದ ಅಡಿಕೆ ಸಂಶೋಧನ ಕೇಂದ್ರಗಳವರು ಸಂಶೋಧನೆ ನಡೆಸುತ್ತಲೇ ಇದ್ದಾರೆ. ಅದರ ಪ್ರಯೋಜನ ಮಾತ್ರ ರೈತರಿಗೆ ಇನ್ನೂ ಸಿಗಬೇಕಾಗಿದೆ.

ಕೊಪ್ಪದಲ್ಲಿ ಸಡಗರದ ರಾಜ್ಯೋತ್ಸವ ಸಮಾರಂಭ

ಕೊಪ್ಪ: ಕನ್ನಡ ರಾಜ್ಯೋತ್ಸವದ ೨೭ನೇ ದಿನಾಚರಣೆಯನ್ನು ಕೊಪ್ಪದಲ್ಲಿ ಎಂದಿನಂತೆ ಸಡಗರದಿಂದ ಆಚರಿಸಲಾಯಿತು.

ಬೆಳಿಗ್ಗೆ ೧೧ ಗಂಟೆಗೆ ಶಂಕರ್ ಕಂಪನಿಯ ಆವರಣದಿಂದ ಹೊರಟ ರಾಜ್ಯೋತ್ಸವ ಮೆರವಣಿಗೆಯಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಹಾಗೂ ವಿವಿಧ ಇಲಾಖೆಗಳು ಪ್ರದರ್ಶಿಸಿದ್ದ ಸ್ಥಿರ ಚಿತ್ರಗಳಲ್ಲದೆ ಎನ್.ಸಿ.ಸಿ., ಸ್ಕೌಟ್ ಮತ್ತು ಗೈಡ್‌ಗಳ ಬಾಲಕ–ಬಾಲಕಿಯರು ಭಾಗವಹಿಸಿದ್ದರು. ಶಂಕರ್ ಕಂಪನಿಯ ಮಾಲೀಕರಾದ ಎ.ಮನೋಹರ ರಾವ್ ಮಕ್ಕಳಿಗೆ ಸಿಹಿ ಹಂಚಿದರು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಿ. ಜಿ. ಗುಜ್ಜರ್ ವಹಿಸಿದ್ದು, ಕೆ.ಸುಂದರನಾಯ್ಕ ಹಾಗೂ ಮೊಹಮ್ಮದ್ ಸಾದಿಕ್ ಮುಖ್ಯ ಅತಿಥಿಗಳಾಗಿದ್ದರು.

ಸನ್ಮಾನ

ಈ ಸಂದರ್ಭದಲ್ಲಿ, ಇತ್ತೀಚಿಗೆ ಐ.ಎಫ್.ಎಸ್. ಪದವಿ ಪಡೆದ ಕೆ.ಸುಂದರನಾಯ್ಕ, ಡಾಕ್ಟರೇಟ್ ಪಡೆದ ಎಸ್.ವಿ.ಮಲ್ಲಿಕಾರ್ಜುನ ಭಟ್ಟ, ವಯೋವೃದ್ಧ ರಂಗಭೂಮಿ ಕಲಾವಿದ ಹರಿಹರಪುರದ ಹೆಚ್.ಆರ್.ಗಣಪತಿ ಪ್ರಭು, ಹಾಗೂ ತರುಣ ಹರಿಕಥಾ ವಿದ್ವಾಂಸ ಜೆ.ಸಿ. ಸುಬ್ಬರಾಯ ಇವರುಗಳನ್ನು ಜರಿ ಶಾಲು ಹೊದಿಸಿ, ಫಲತಾಂಬೂಲ ನೀಡಿ ಸನ್ಮಾನಿಸಲಾಯಿತು.

ಸನ್ಮಾನಕ್ಕೆ ಉತ್ತರವಾಗಿ ಡಾ| ಎಸ್.ವಿ.ಎಂ., ಹೆಚ್.ಆರ್.ಗಣಪತಿ ಪ್ರಭು ಮತ್ತು ಜೆ.ಸಿ.ಸುಬ್ಬರಾಯ ಮಾತನಾಡಿದರು. ಸುಬ್ಬರಾಯ ತಾವೇ ರಚಿಸಿದ ಕನ್ನಡ ಲಾವಣಿಯೊಂದನ್ನು ಹಾಡಿದರು.

ರಾಜ್ಯೋತ್ಸವದ ಆಟೋಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಮೊಹಮ್ಮದ್ ಸಾದಿಕ್ ಬಹುಮಾನ ಹಂಚಿದರು.

ಮುಖ್ಯ ಭಾಷಣಕಾರರಾಗಿದ್ದ ಕೆ. ವಿ. ಬಾಲಕೃಷ್ಣ ರಾವ್ ಮಾತನಾಡಿ, ಕೇರಳದಲ್ಲಿ ಜನ ಇತರೆ ಭಾಷೆಗಳನ್ನು ದ್ವೇಷಿಸದಿದ್ದರೂ ತಮ್ಮ ವ್ಯವಹಾರಗಳನ್ನು ಮಾತ್ರ ಮಲಯಾಳಿಯಲ್ಲೇ ಮಾಡುತ್ತಾರೆ. ಅವರಿಂದ ನಾವು ಕಲಿಯಬೇಕಾದ್ದಿದೆ ಎಂದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ವಿವಿಧ ಶಾಲೆಗಳ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ಕೊನೆಯಲ್ಲಿ 'ಅಂಕುರ' ಬಳಗದವರಿಂದ 'ಮೃತ್ಯು' ಹಾಗೂ ಬಾಳಗಡಿಯ ರಂಗಶ್ರೀ ಕಲಾವಿದರಿಂದ 'ವಿಷ ಕ್ರಿಮಿಗಳು' ಎಂಬ ನಾಟಕಗಳು ನಡೆದವು.

ಅಪಸ್ವರ

§ ಬೆಳಿಗ್ಗೆ ೮ ಗಂಟೆಗೇ ಮೆರವಣಿಗೆಗೆಂದು ಮಕ್ಕಳನ್ನು ಕರೆತಂದು ಹತ್ತುವರೆ–ಹನ್ನೊಂದು ಗಂಟೆಯವರೆಗೆ ಕಾಯಿಸಿ ಬಿಸಿಲಲ್ಲಿ ಅವರನ್ನು ಮೆರವಣಿಗೆ ಮಾಡುವ ಬಗ್ಗೆ ಬಹಳ ಜನ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

§ ಪ್ರತಿ ಬಾರಿ ಮೇಲಿನ ಪೇಟೆಯ ತುದಿಯಿಂದ ಕೆಳಗಿನ ಪೇಟೆಯ ತುದಿಯವರೆಗೆ ನಡೆಯುತ್ತಿದ್ದ ಮೆರವಣಿಗೆ ಈ ಬಾರಿ ಮೊಟಕಾಗಿ ಚಿಕ್ಕಮಗಳೂರು ಸರ್ಕಲ್ ಮತ್ತು ಬಸ್ ಸ್ಟ್ಯಾಂಡ್‌ವರೆಗೆ ಮಾತ್ರ ನಡೆದುದು, ತಮ್ಮ ಮಕ್ಕಳ ಮೆರವಣಿಗೆ ನೋಡಲು ಕಾಯುತ್ತಿದ್ದ ನೂರಾರು ಜನರಿಗೆ ನಿರಾಶೆಯುಂಟುಮಾಡಿತು. ಎಷ್ಟೋ ಜನ ಓಡಿಬಂದು, ಹೋಗುತ್ತಿದ್ದ ಮೆರವಣಿಗೆಯನ್ನು ನೋಡುತ್ತ ನಿಂತದ್ದು ಕಂಡುಬಂತು.

§ ಕಿರಿಯ ಕಾಲೇಜಿನ ವಿದ್ಯಾರ್ಥಿಗಳು ಕಷ್ಟ ಪಟ್ಟು ಸ್ಥಿರ ಚಿತ್ರವನ್ನು ವ್ಯವಸ್ಥೆ ಮಾಡಿದ್ದರಂತೆ. ಆದರೆ ಸರಿಯಾಗಿ ಟ್ರಾಕ್ಟರ್ ವ್ಯವಸ್ಥೆ ಆಗಲಿಲ್ಲವಂತೆ. ಕೇವಲ ಅರ್ಧ ಗಂಟೆ ಮುಂಚೆ ಟ್ರಾಕ್ಟರ್ ಕಳಿಸುವುದಾಗಿ ವ್ಯವಸ್ಥಾಪಕರು ತಿಳಿಸಿದಾಗ ವಿದ್ಯಾರ್ಥಿಗಳು ಪ್ರದರ್ಶನದ ಆಸೆ ಬಿಟ್ಟರಂತೆ. (ನಿರಾಶರಾದ ವಿದ್ಯಾರ್ಥಿಗಳ ಮಾತು ಕೇಳಿಸಿಕೊಂಡಿದ್ದು.)

§ ಕನ್ನಡದಲ್ಲೇ ನಡೆಯುತ್ತಿದ್ದ ಮನರಂಜನೆ ಕಾರ್ಯಕ್ರಮದ ನಡುವೆ ಒಂದು ಹಿಂದೀ ಸಿನಿಮಾ ಹಾಡು ತೂರಿ, ಆಭಾಸ ವುಂಟುಮಾಡಿತು. ಉರ್ದು ಶಾಲೆಯ ಮಕ್ಕಳು ತುಂಬ ಚಂದ ವೇಷದಲ್ಲಿ ಉತ್ತಮವಾಗಿ ನೃತ್ಯ ಮಾಡಿದರು. ಆದರೆ ಅದಕ್ಕೆ ಈ ಹಿಂದೀ ಹಾಡು ಆಯ್ದುಕೊಂಡ ಅಧ್ಯಾಪಕರ ಬಗ್ಗೆ ಸಭಿಕರಲ್ಲಿ ಅಸಮಾಧಾನ ವ್ಯಕ್ತವಾಯಿತು.

§ "ಭಾಷಣಕಾರರಲ್ಲಿ ಸಮಯಪ್ರಜ್ಞೆಯ ಕೊರತೆ" ಎಂಬ ವಿಷಯದಲ್ಲಿ ಸಭಿಕರ ನಡುವೆ ತೀವ್ರವಾಗಿ ಟೀಕೆ ಕೇಳಿಬರುತ್ತಿತ್ತು. ಹೆಚ್ಚಿನ ಜನ ಅಪರೂಪಕ್ಕೊಮ್ಮೆ ದೊರೆಯುವ ಸರಳ ಮನರಂಜನೆಗಾಗಿ ಒಂದು ಗಂಟೆಗಟ್ಟಲೆ ಕಾಯುತ್ತಿದ್ದರೆ, ಹೆಚ್ಚಿನ ಭಾಷಣಕಾರರು ಯಾವುದೇ ವಿವೇಚನೆಯಿಲ್ಲದೆ, ಸಮಯ ಪ್ರಜ್ಞೆ ಇಲ್ಲದೆ ಜನರ ಸಹನೆಯ ದುರುಪಯೋಗ ಪಡೆಯುತ್ತಾರೆ. ಭಾಷಣದ ಪ್ರಾರಂಭದಲ್ಲಿ 'ಅವರೆ, ಇವರೆ, ಇಂಥವರೆ ಮತ್ತೊಬ್ಬರೆ, ಮಗದೊಬ್ಬರೆ . . . ' ಅಂತ ಇಪ್ಪತ್ತೆಂಟು ಜನರನ್ನು ಸಂಬೋಧಿಸುವುದರಲ್ಲೇ ಬಹಳಷ್ಟು ಸಮಯ ವ್ಯರ್ಥಮಾಡುತ್ತಾರೆ...." ಮುಂತಾಗಿ ಜನ ಮಾತಾಡಿಕೊಳ್ಳುತ್ತಿದ್ದುದು ಕೇಳಿಸಿತು.

—ಇದಿಷ್ಟು ಈ ಕಾರ್ಯಕ್ರಮದ ಬಗ್ಗೆ ಕೇಳಿಬಂದ 'ಅಪಸ್ವರ'ದ ಸ್ವಲ್ಪ ಭಾಗ.

ಪುನಃ ನವೆಂಬರ್ ಬಂದಾಗಲೇ ....

ಕೊಪ್ಪ: ಕನ್ನಡ ರಾಜ್ಯೋತ್ಸವದ ಸಮಾರಂಭದಲ್ಲಿ ಸನ್ಮಾನಿತರಾಗಿ ಮಾತನಾಡಿದ ಡಾ| ಎಸ್.ವಿ.ಎಂ. "ಯುಗಾದಿ ಬಂದಾಗ ಗಿಡ ಮರಗಳೆಲ್ಲೆಲ್ಲ ಚಿಗುರು–ಹೂ ಬಿಡುತ್ತವೆ. ಆದರೆ ಸ್ವಲ್ಪ ದಿನಕ್ಕೇ ಅವೆಲ್ಲ ಹಣ್ಣಾಗಿ ಉದುರುತ್ತವೆ. ಹಾಗೆಯೇ ನವೆಂಬರ್ ಬಂದೊಡನೆ ಎಲ್ಲಕಡೆ ಕನ್ನಡದ ಸಮಾರಂಭ, ಪ್ರಚಾರ, ಸರ್ಕಾರಿ ಆಜ್ಞೆಗಳು ಮುಂತಾದುವು ನಡೆಯತೊಡಗುತ್ತವೆ. ಕೆಲವೇ ದಿನದಲ್ಲಿ ಎಲ್ಲ ಮರೆಯುತ್ತದೆ. ಮತ್ತೆ ಮುಂದಿನ ನವೆಂಬರ್ ಬಂದಾಗಲೇ ಪುನಃ ಕನ್ನಡದ ಜ್ಞಾಪಕ ಬರುವುದು." ಎಂದು ವಿಷಾದ ವ್ಯಕ್ತಪಡಿಸಿದರು.

ಕನ್ನಡ ಅಭಿಮಾನವುಳ್ಳವರು ತಮ್ಮಕ್ಷೇತ್ರದಲ್ಲಿ ತಾವು ಕನ್ನಡದ ಬಳಕೆ ಜಾಸ್ತಿ ಮಾಡಿಕೊಂಡರೆ ತಾನಾಗಿಯೇ ಬೇರೆ ಭಾಷೆಗಳ ಪ್ರಭಾವ ಕಡಿಮೆಯಾಗುತ್ತದೆ ಎಂದ ಅವರು, "ಕತ್ತಲೆಗೆ ಹಿಡಿಶಾಪ ಹಾಕುತ್ತ ಕೂರುವ ಬದಲು ಹೇಗಾದರೂ ಒಂದು ಹಣತೆಯನ್ನಾದರೂ ಸಂಪಾದಿಸಿ ಉರಿಸಿಟ್ಟರೆ ಅಷ್ಟಾದರೂ ಕತ್ತಲು ಕಮ್ಮಿಯಾಗುತ್ತದೆ" ಎಂಬ ಡಿವಿಜಿಯವರ ಕವನವನ್ನು ಉದಹರಿಸಿದರು.

ಬಿಳಾಲುಕೊಪ್ಪದಲ್ಲಿ ಕನ್ನಡ ರಾಜ್ಯೋತ್ಸವ

ಬಿಳಾಲು ಕೊಪ್ಪ: ಇಲ್ಲಿನ ಶ್ರೀ ವಿದ್ಯಾ ಗಣಪತಿ ಯುವಕ ರೈತ ಸಂಘದ ಆಶ್ರಯದಲ್ಲಿ ೨೭ನೇ ಕನ್ನಡ ರಾಜ್ಯೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಕಲ್ಲುಗುಡ್ಡೆ ಮತ್ತು ಗುಡ್ಡೇತೋಟ ಯುವಕ ಸಂಘಗಳು ಹಾಗೂ ಮಹಿಳಾ ಮಂಡಳಿಗಳು ಮತ್ತು ಬಿಳಾಲು ಕೊಪ್ಪ ಪ್ರಗತಿ ಮಹಿಳಾ ಮಂಡಳಿ ಭಾಗವಹಿಸಿದ್ದವು.

ಸಮಾರಂಭದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ.ಎಸ್. ವಾಸುದೇವ ಮೂರ್ತಿ ವಹಿಸಿದ್ದರು. ಪ್ರಾರಂಭದಲ್ಲಿ ಕು|| ಮಲ್ಲಿಕಾ ಮತ್ತು ಅನಸೂಯ ಇವರ ಪ್ರಾರ್ಥನೆಯ ನಂತರ ಸಂಘದ ಅಧ್ಯಕ್ಷ ಬಿ.ಎನ್.ವೆಂಕಟರಮಣ ಸ್ವಾಗತಿಸಿದರು. ಕಾರ್ಯಕ್ರಮದ ಅಂಗವಾಗಿ ಚರ್ಚಾಸ್ಪರ್ಧೆ, ಆಶು ಭಾಷಣ ಸ್ಪರ್ಧೆ ಮತ್ತು ಲಘು ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಬಸರೀಕಟ್ಟೆ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಪಿ.ಎಸ್.ಹೆಗ್ಡೆ ಬಹುಮಾನ ವಿತರಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ವಿಷ್ಣುಮೂರ್ತಿ ಕಾಮತ್, ರಾಮಕೃಷ್ಣ ಭಟ್ ಮತ್ತು ನಾಗಭೂಷಣ್ ಭಾಗವಹಿಸಿದ್ದರು. ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಬಿ. ಆರ್.ವೆಂಕಟಕೃಷ್ಣ ವಂದಿಸಿದರು.

ದೋರಗಲ್ಲಿನಲ್ಲೊಂದು ಪುಟ್ಟ ಸಾಹಸ:

ತರುಣರ ಯತ್ನದಿಂದ ಕಳ್ಳರ ಸೆರೆ

ಗಡಿಕಲ್: ಇಲ್ಲಿಗೆ ಸಮೀಪದ ದೋರಗಲ್ಲಿನ ಈಶ್ವರ ದೇವಸ್ಥಾನದಿಂದ ಕಾಣಿಕೆ ಡಬ್ಬಿ ಹಾರಿಸುವ ಯತ್ನವೊಂದು ವಿಫಲವಾದ ಘಟನೆ ನಡೆದಿದೆ.

ಸ.೨ರ ಸಂಜೆ ೭-೩೦ರ ಸುಮಾರಿಗೆ ಅರ್ಚಕರ ಕಣ್ಣಿಗೆ ಇಬ್ಬರು ಸಣ್ಣದ ಪುಡಿ ಎರಚಿ ಕಾಣಿಕೆ ಡಬ್ಬಿಯೊಂದಿಗೆ ಪರಾರಿಯಾದರು. ಅರ್ಚಕರು ಕೂಗಿದಾಗ ನೆರೆಹೊರೆಯವರು ಸೇರಿ ಇಲ್ಲಿನ ಆಂಜನೇಯ ಸಮಿತಿಯವರಿಗೆ ಸುದ್ದಿ ಮುಟ್ಟಿಸಿದರು. ಸಮಿತಿಯ ಸದಸ್ಯರು ಮಿಂಚಿನ ಕಾರ್ಯಾಚರಣೆ ನಡೆಸಿ ಸುಬ್ರಹ್ಮಣ್ಯ ಎಂಬುವನನ್ನು ಹಿಡಿದು ಜವನು ಕೊಟ್ಟು ಸುಳಿವಿನ ಮೇಲೆ ಮಾರುದಿನ ಬೆಳಗಿನ ಜಾವ ಕೊಪ್ಪದಿಂದ ಶಿವಮೊಗ್ಗಕ್ಕೆ ಹೊರಟಿದ್ದ ಕಾಮತ್ ಎಂಬುವನನ್ನೂ ಹಿಡಿದರು.

ಕಾಣಿಕೆ ಡಬ್ಬಿ, ನಗದು, ಕಳ್ಳರು ಚೋರಿ ಬೇರೆ ಕಡೆ ಬಳಸುತ್ತಿದ್ದ ನಕಲಿ ಬೀಗದ ಕೈ ಗೊಂಚಲುಗಳ ಸಹಿತ ಕಳ್ಳರನ್ನು ಊರಲ್ಲಿ ಸಣ್ಣ ಮೆರವಣಿಗೆ ಮಾಡಿ, ನಂತರ 'ವಿಧ್ಯುಕ್ತ'ವಾಗಿ ಕೊಪ್ಪ ಪೋಲೀಸರ ವಶಕ್ಕೊಪ್ಪಿಸಿದ್ದಾಗಿಯೂ ಪೋಲೀಸರು ಪ್ರಕರಣ ದಾಖಲು ಮಾಡಿಕೊಂಡು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾಗಿಯೂ ತಿಳಿದು ಬಂದಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ

ಕೆಸವೆ ದತ್ತು ಗ್ರಾಮದಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಪ್ರಗತಿ

ಕೆಸವೆ: ಸರ್ಕಾರದ ೨೦ ಅಂಶಗಳ ಕಾರ್ಯಕ್ರಮದ ಅನ್ವಯ ದತ್ತು ತೆಗೆದುಕೊಳ್ಳಲಾಗಿರುವ ಈ ಗ್ರಾಮದ ಸರ್ವತೋಮುಖವಾದ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳು ಹಾಕಿಕೊಂಡಿರುವ ಕಾರ್ಯಕ್ರಮಗಳಂತೆ ನಡೆದಿರುವ ಪ್ರಗತಿಯ ಪಕ್ಷಿನೋಟ ಇಲ್ಲಿದೆ.

ಕೃಷಿ ಇಲಾಖೆ: ೧೯೮೧-೮೨ನೇ ಸಾಲಿಗೆ ೨೭ ಜನ ರೈತರಿಗೆ ಕೃಷಿ ಬೆಳೆಗಾಗಿ ೧ ಲಕ್ಷ ೧೯ ಸಾವಿರ ರೂ.ಗಳನ್ನು ಸಹಕಾರ ಸಂಘದಿಂದ ವಿತರಣೆ ಮಾಡಲಾಗಿದೆ. ಬರುವ ಬೇಸಿಗೆಯಲ್ಲಿ ೧೬ ಹೆಕ್ಟೇರ್ ಭೂಮಿಯಲ್ಲಿ ದ್ವಿದಳ ಧಾನ್ಯಗಳನ್ನೂ ೪ ಹೆಕ್ಟೇರ್‌ನಲ್ಲಿ ಎಣ್ಣೆ ಕಾಳುಗಳನ್ನೂ ಬೆಳೆಯುವ ಗುರಿ ಇಟ್ಟುಕೊಳ್ಳಲಾಗಿದೆ.

ಇನ್ನಿತರ ಪ್ರಮುಖ ಕಾರ್ಯಗಳೆಂದರೆ: ೫೫ ಹೆಕ್ಟೇರ್ ಭೂಮಿಯಲ್ಲಿ ಅಧಿಕ ಇಳುವರಿ ಬೆಳೆ, ೩೦ ಹೆಕ್ಟೇರ್‌ಗೆ ಬೀಜೋಪಚಾರ, ೫ ಹೆಕ್ಟೇರ್ ಬಂಜರು ಭೂಮಿ ಅಭಿವೃದ್ಧಿ, ೨.೫ ಹೆಕ್ಟೇರ್‌ನಲ್ಲಿ ಸುಬಾಬುಲ್ ಗಿಡಗಳು, ೮.೭ ಟನ್ ರಸಗೊಬ್ಬರ ಪೂರೈಕೆ, ೪೦ ಹೆಕ್ಟೇರ್‌ನಲ್ಲಿ ಸಸ್ಯ ಸಂರಕ್ಷಣೆ, ೨ ಟನ್ ಶಿಲಾರಂಜಕ ಪೂರೈಕೆ, ೮.೫ ಹೆಕ್ಟೇರಿಗೆ ಸುಧಾರಿತ ಬೀಜ, ೧೫೦ ಮಣ್ಣಿನ ಮಾದರಿ ಪರೀಕ್ಷೆ, ೩,೫೦೦ ಸುಬಾಬುಲ್ ಗಿಡಗಳ ವಿತರಣೆ ಇತ್ಯಾದಿ.

ಇದಲ್ಲದೆ ೧೦ ಗೊಬ್ಬರ ಅನಿಲ ಯಂತ್ರಗಳ ನಿರ್ಮಾಣ ಪ್ರಗತಿಯಲ್ಲಿದೆ.

ತೋಟಗಾರಿಕೆ ಇಲಾಖೆ ಇದೇ ಗ್ರಾಮದಲ್ಲಿರುವ ಒಂದೇ ಒಂದು ಅರ್ಹ ಹರಿಜನ ಕುಟುಂಬಕ್ಕೆ ೩೦ ತೆಂಗಿನ ಸಸಿಗಳನ್ನು ಕೊಟ್ಟು ಅವುಗಳ ಆರೈಕೆ ನೋಡಿಕೊಳ್ಳುತ್ತಿದೆ. ಆ ಕುಟುಂಬಕ್ಕಿರುವ ೨ ಎಕರೆ ಜಮೀನನ್ನು ನಾಟಿ ಮಾಡಿಸಿದೆ.

ಅರಣ್ಯ ಇಲಾಖೆ ೨.೫ ಹೆಕ್ಟೇರ್‌ನಲ್ಲಿ ಸಾಮಾಜಿಕ ಅರಣ್ಯ ಬೆಳೆಸುತ್ತಿದೆ.

ಲೋಕೋಪಯೋಗಿ ಇಲಾಖೆ ೧ ಕಿ. ಮೀ. ಉದ್ದ ರಸ್ತೆಗೆ ಜಲ್ಲಿ ಹಾಕಿ ಸಮ ಮಾಡಿದೆ. ಜಲ್ಲಿ ಸಂಗ್ರಹಣೆ ಮಾಡಲಾಗಿದ್ದು ಬಡಾವಣೆ ಕೆಲಸ ಸದ್ಯದಲ್ಲೇ ಮುಂದುವರಿಯುತ್ತದೆ.

ಪಶು ಸಂಗೋಪನ ಇಲಾಖೆ ೧ ಸಂಚಾರಿ ವಾಹನದ ವ್ಯವಸ್ಥೆ ಮಾಡಿದ್ದು, ೧೦ ಜನರಿಗೆ ಬ್ಯಾಂಕ್ ಮೂಲಕ ೧೦ ತಳಿ ಹಸುಗಳನ್ನು ಕೊಟ್ಟು ಅವರಿಗೆ ೫ ಎಕ್ರೆ ಭೂಮಿಯಲ್ಲಿ ಹುಲ್ಲು ಬೆಳೆಸುವ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತಿದೆ.

೩.೨ ಹೆಕ್ಟೇರ್‌ನಲ್ಲಿ **ರೇಷ್ಮೆ ಇಲಾಖೆ** ರೇಷ್ಮೆ ಬೆಳೆಗೆ ವ್ಯವಸ್ಥೆ ಮಾಡಿದೆ.

ತಾ|| ಅ|| ಮಂಡಳಿ, ಕೊಪ್ಪ

ರಾ.ಗ್ರಾ.ಉ. ಯೋಜನೆಯಡಿ ೧ ರಂಗ ಮಂಟಪ ನಿರ್ಮಾಣ, ೪ ಜನತಾ ಮನೆಗಳು (ಗುರಿ ೧೭), ೧ ಮೋರಿ ರಚನೆ ಯಾಗಿದ್ದು, ಸಮುದಾಯ ಭವನದ ಕಟ್ಟಡ ಪ್ರಗತಿಯಲ್ಲಿದೆ.

ಈ ಎಲ್ಲ ಕಾರ್ಯಕ್ರಮಗಳ ಉಸ್ತುವಾರಿಗೆ ಗ್ರಾಮಪಂಚಾಯ್ತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದ್ದು, ಅದು ಪ್ರತಿ ತಿಂಗಳ ೨೫ ರಂದು ಸಭೆ ಸೇರಿ ಪ್ರಗತಿ ಪರಿಶೀಲನೆ ನಡೆಸುವುದು.

ಗ್ರಾಮಕ್ಕೆ ಅತ್ಯಗತ್ಯವಾಗಿ ಬೇಕಾದ ದೂರವಾಣಿ ಸೌಲಭ್ಯವನ್ನು ಒದಗಿಸಲು ಸಮಿತಿ ಅಂಚೆ - ತಂತಿ ಇಲಾಖೆಯನ್ನು ಕೋರಿದೆ.

ಅಂಗನವಾಡಿ ಕಾರ್ಯಕರ್ತೆಯರು

ತರಬೇತಿಗಾಗಿ ಹಾಸನಕ್ಕೆ

ಕೊಪ್ಪ: ಈ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯರು ೭ ದಿನಗಳ ತರಬೇತಿ ಶಿಬಿರದ ಮುಕ್ತಾಯ ಸಮಾರಂಭ ಅ. ೩೧ ರಂದು ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ದಾವಣಗೆರೆ ವಿಭಾಗದ ಸಹಾಯಕ ನಿರ್ದೇಶಕ ವೀರೇಗೌಡ ಮುಕ್ತಾಯ ಭಾಷಣ ಮಾಡಿದರು.

ಕೆ.ಬಾಲಣ್ಣ ಗೌಡ ಸ್ವಾಗತಿಸಿದರು, ಅಂಗನವಾಡಿಯ ಬಾಲ ವಿಕಾಸ ಯೋಜನಾಧಿಕಾರಿ ಜಿನ್ನಾರೆಡ್ಡಿ ವಂದಿಸಿದರು.

೫೦ ಜನ ಕಾರ್ಯಕರ್ತೆಯರ ತಂಡವನ್ನು ೪ ತಿಂಗಳ ಹೆಚ್ಚಿನ ತರಬೇತಿಗಾಗಿ ಹಾಸನಕ್ಕೆ ಕಳಿಸಿಕೊಡಲಾಯಿತು. ಉಳಿದ ೨ನೇ ತಂಡವನ್ನು ಶೀಘ್ರದಲ್ಲೇ ಕಳಿಸಲಾಗುವುದೆಂದು ಪ್ರಕಟಣೆಯೊಂದು ತಿಳಿಸಿದೆ.

ಉತ್ತಮೇಶ್ವರ ಆಸ್ಪತ್ರೆ ಬಾಗಿಲು ತೆರೆದೀತೆ?

(೧ನೇ ಪುಟದಿಂದ)

ಆಸ್ಪತ್ರೆ ಇನ್ನೂ ಪ್ರಾರಂಭವಾಗಿಲ್ಲ.

ಪ್ರಾರಂಭವಾಗಬೇಕಾದರೆ ಮಂತ್ರಿಗಳಿಂದ ಉದ್ಘಾಟನೆಯಾಗಬೇಕು. ಆರೋಗ್ಯ ಮಂತ್ರಿಗಳನ್ನೇ ಕರೆತರಬೇಕೆಂದು ಬೇಗಾನೆಯವರ ಪ್ರಯತ್ನವಂತೆ. ಅವರಿಗೆ ವಿದೇಶ ಯಾತ್ರೆ, ಅಲ್ಲಿ-ದಿಲ್ಲಿ-ಇಲ್ಲಿ ಅಂತ ಬಿಡುವೇ ಆಗಿಲ್ಲವಂತೆ. ಅವರೇ ಉದ್ಘಾಟನೆಗೆ ಬಂದರೆ ಅವರಿಂದ ಇನ್ನಷ್ಟು ಸೌಲಭ್ಯಕ್ಕೆ 'ಅಸ್ತು' ಅನ್ನಿಸಿಕೊಳ್ಳಬಹುದು ಅಂತ ರಾಮಯ್ಯನವರಿಗೇನೋ ಆಶೆಯಿರಬಹುದು. ಆದರೆ ಆಸ್ಪತ್ರೆ? ಎರಡು ಹಕ್ಕಿಗಳನ್ನು ಒಟ್ಟಿಗೆ ಹಿಡಿಯೋಣ ಅಂತ, ಇದ್ದ ಒಂದು ಹಕ್ಕಿಯನ್ನೂ ಬಿಟ್ಟುಕೊಂಡು—ಇನ್ನೊಂದು ಹಕ್ಕಿ ಬರಲಿ ಅಂತ — ಕಾದುಕೂತಂತೆ ಆಗಿದೆ ಎನ್ನುತ್ತಾರೆ ಸುತ್ತಲ ಹತ್ತಾರು ಹಳ್ಳಿಗಳ ಚಾತಕ ಪಕ್ಷಿ ಜನ.

ಅಂತೋ ಇಂತೋ—ಅದೊಂದು ಆಸ್ಪತ್ರೆಯಾದರೂ ಬೇಗ ತೆರೆದೀತೇ?

ಕಿಗ್ಗದಲ್ಲಿ ರುದ್ರಹೋಮಕ್ಕೆ ಸಿದ್ಧತೆ

ಕಿಗ್ಗ: ಇಲ್ಲಿನ "ಶ್ರೀ ಋಷ್ಯಶೃಂಗೇಶ್ವರ ಸ್ವಾಮಿ ಮಹಾರುದ್ರಹೋಮ ಸೇವಾ ಸಮಿತಿ"ಯ ಆಶ್ರಯದಲ್ಲಿ ಡಿಸೆಂಬರ್ ೧೩ರಂದು ಮಹಾ ರುದ್ರಹೋಮ ಮತ್ತು ಶತಚಂಡೀ ಯಾಗ ಮುಂತಾದ ದೇವತಾ ಕಾರ್ಯಗಳನ್ನು ಹರಿಹರಪುರದ ಸ್ವಾಮಿಗಳ ಸಮ್ಮುಖದಲ್ಲಿ ನೆರವೇರಿಸಲು ತೀರ್ಮಾನಿಸಲಾಗಿದೆ.

ಸುಮಾರು ೨೫ ಸಾವಿರ ರೂ. ಖರ್ಚಿನ ಈ ಸಮಾರಂಭ ಸಾರ್ವಜನಿಕರ ಸಹಕಾರದಿಂದಲೇ ಆಗಬೇಕಾಗಿದ್ದು ಭಕ್ತಾದಿಗಳು ಈ ಮಹತ್ಕಾರ್ಯದಲ್ಲಿ ತನು, ಮನ, ಧನಗಳಿಂದ ಭಾಗಿಗಳಾಗಬೇಕೆಂದು ಸಮಿತಿಯ ಕಾರ್ಯದರ್ಶಿ ಬಿ.ಕೆ.ಶೇಷಗಿರಿಯಪ್ಪ ಕೋರಿದ್ದಾರೆ.

ಆರೆಸ್ಸೆಸ್ ಧ್ವಜ ಪ್ರದಾನೋತ್ಸವ

ಸಿಮ್ಮಾಸು: ಅ.೩೧ ರಂದು ಇಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಧ್ವಜ ಪ್ರದಾನೋತ್ಸವ ಕಾರ್ಯಕ್ರಮ ನಡೆಯಿತು. ಸಮಾರಂಭದಲ್ಲಿ ಸೀತಾರಾಂ ಕೆದಿಲಾಯ ಬೌದ್ಧಿಕ್ ನೀಡಿದರು. ಅಣ್ಣಯ್ಯ ಹೆಗ್ಡೆಯವರು ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ "ಇಂದು ದೇಶದ ಬಗ್ಗೆ ನಿಜವಾಗಿ ಚಿಂತನೆ ಮಾಡುವವರು ಆರೆಸ್ಸೆಸ್‌ನವರು. ಇವತ್ತು ದೇಶದಲ್ಲಿ ಅನೇಕರು ಅನೇಕ ರೀತಿಯಲ್ಲಿ ಜನಕ್ಕೆ ಪೊಳ್ಳು ಆಶ್ವಾಸನೆ ಕೊಟ್ಟು 'ನಿಮ್ಮನ್ನು ಕಾಪಾಡುತ್ತೇವೆ' ಅಂತಾರೆ. ಆದರೆ ಆರೆಸ್ಸೆಸ್‌ನವರು ನುಡಿದಂತೆ ನಡೀತಾರೆ. ಆರೆಸ್ಸೆಸ್ ಹಣ ಅಥವಾ ಯಾವುದೇ ರೀತಿಯ ಫಲಾಪೇಕ್ಷೆ ಇಲ್ಲದ ಹಿಂದು ಸಂಸ್ಥೆ. ಫಲಾಪೇಕ್ಷೆ ಯಾರಲ್ಲಿಲ್ಲವೋ ಅವರು ಪ್ರಾಮಾಣಿಕರೇ. ಇಲ್ಲಿ ಯಾವುದೇ ರೀತಿಯ ರಾಜಕೀಯ ಇಲ್ಲ, ಜನರಿಗೆ ಯಾವುದೇ ಒಳ್ಳೆ ಕಾರ್ಯದಲ್ಲಾದರೂ ಇವರು ಮಾರ್ಗದರ್ಶಿಸುತ್ತಾರೆ. ಮಾರ್ಗದರ್ಶನ ಇಲ್ಲದವನು ಮನುಷ್ಯನಾಗುವುದಿಲ್ಲ. ಪ್ರತಿಯೊಬ್ಬರೂ ಇದರ ಬಗ್ಗೆ ಸಹಕರಿಸುವುದರ ಮುಖೇನ ಯುವಕರಾದ ನೀವು ಕಾರ್ಯೋನ್ಮುಖರಾಗಿ" ಎಂದು ಕರೆಕೊಟ್ಟರು.

(ವರದಿ: **ರಾಜಶೇಖರ**)

ಇಲಾಖೆಗಳ ಕಾರ್ಯ ವೈಖರಿ ಬಗ್ಗೆ ಟೀಕೆ

ಕಿಗ್ಗ: ಮರ್ಕಲ್ ಪಂಚಾಯ್ತಿಯ ಗ್ರಾಮ ಸಭೆ ಇಲ್ಲಿ ಅ.೨೫ ರಂದು ಕೆ.ವಿ.ಪ್ರೇಮನಾಥ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ ವರ್ಷ ಗಿರಿಜನರಿಗೆ ಎತ್ತು, ಗಾಡಿ ಹಂಚುವಾಗ ಕೆಲವರಿಗೆ ಎತ್ತು , ಕೆಲವರಿಗೆ ಗಾಡಿ ಮಾತ್ರ ಕೊಟ್ಟಿದ್ದು, ಇದರಿಂದ ಯಾರಿಗೂ ಪ್ರಯೋಜನವಾಗಿಲ್ಲವೆಂಬುದನ್ನು ತಾ.ಅ.ಮಂ. ಸದಸ್ಯರ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ಸಭೆ ತೀರ್ಮಾನಿಸಿತು.

ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ರೈತರ ಬಳಿಗೆ ಬರುತ್ತಿಲ್ಲವೆಂದು ಸಭೆ ತನ್ನ ಅಸಂತೋಷ ವ್ಯಕ್ತಪಡಿಸಿತು.

ಐಆರ್‌ಡಿಪಿ ಸಾಲದ ಬಗ್ಗೆ ಬ್ಯಾಂಕಿನವರು ಇಲ್ಲದ ತೊಂದರೆ ಕೊಡುತ್ತಿದ್ದಾರೆಂದು ಆಪಾದಿಸಿದ ಸಭೆ ಆ ಬಗ್ಗೆ ಸಂಬಂಧಪಟ್ಟವರ ಜೊತೆ ಚರ್ಚಿಸಬೇಕೆಂದು ತಾ.ಅ.ಮಂ. ಸದಸ್ಯರನ್ನು ವಿನಂತಿಸಿತು.

ಹಳ್ಳಿಯಲ್ಲಿ ಈಚೆಗೆ ಹೊಡೆದ ಡಿಡಿಟಿಯ ಬಗ್ಗೆ ವ್ಯವಸ್ಥೆಯಿಲ್ಲದಿರುವ ಬಗ್ಗೆ ಆರೋಗ್ಯಾಧಿಕಾರಿಗಳಿಗೆ ಮನವರಿಕೆ ಮಾಡಲಾಯಿತು.